ಜೊಲ್ಲೆ ಗ್ರುಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

# ದರ್ಪಣ

ಮಾರ್ಚ 2026–ಸಂಪುಟ–10 ಸಂಚಿಕೆ–03




ಬೆಳಗಾವಿಯ ಸಿ.ಪಿ.ಎಡ್. ಮೈದಾನದಲ್ಲಿ ದಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ವತಿಯಿಂದ ಆಯೋಜಿಸಲಾದ ಜಿಲ್ಲೆಯ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಅವರ ಕುಟುಂಬದವರಿಗೆ 1 ಲಕ್ಷ ದವರಿಗೆ ಆರೋಗ್ಯ ವಿಮೆ, ಸಿಬ್ಬಂದಿಗಳಿಗೆ 5 ಲಕ್ಷ ವರೆಗೆ ಜೀವ ವಿಮೆ ಮತ್ತು ಅಪಘಾತ ವಿಮೆ 10 ಲಕ್ಷ ರೂ ನೀಡಲಾಗುವುದು. ಕೃಷಿಯೇತರ ಸಾಲಗಳನ್ನು PKPS ಗಳ ರಿಯಾಯತಿ ಬಡ್ಡಿ ದರದಲ್ಲಿ ವಿತರಣೆ ಹಾಗೂ ಬ್ಯಾಂಕಿನ ವಿವಿಧ ಹೊಸ ಯೋಜನೆಗಳಿಗೆ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಅಧಿಕೃತ ಚಾಲನೆ ನೀಡಿದರು.

## ಸಹಕಾರ ಮಹರ್ಷಿ, ಕಾಯಕಯೋಗಿ
## ಶ್ರೀ ಅಣ್ಣಾಸಾಹೇಬ ಜೊಲ್ಲೆ

ಸಹಕಾರ ರತ್ನ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರು ನಮ್ಮ ನಾಡು ಕಂಡ ಧೀಮಂತ ನಾಯಕರಾಗಿದ್ದಾರೆ. ತಮ್ಮ ದೂರ ದೃಷ್ಟಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಾವೀಣ್ಯತೆಯನ್ನು ತುಂಬಿ ಸರ್ವತೋಮುಖ ಅಭಿವೃದ್ಧಿಗೆ ಕಂಕಣ ಬದ್ಧರಾಗಿ ಶ್ರಮಿಸುತ್ತಿದ್ದಾರೆ. ಅಣ್ಣಾಜೀ ಅವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆ ಅಪಾರವಾದುದು. ಅಂತೆಯೇ ಅವರ ಹೆಸರು ಸಹಕಾರ ಕ್ಷೇತ್ರದಲ್ಲಿ ಕಂಗೊಳಿಸುತ್ತಿದೆ.

ದಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಮೇಲೆ ಹೊಸ ಮನ್ವಂತರಕ್ಕೆ ನಾಂದಿ ಹಾಡಿದ್ದಾರೆ. ಬೆಳಗಾವಿ ಡಿಸಿಸಿ ಬ್ಯಾಂಕ್‌ನ್ನು ರಾಜ್ಯದಲ್ಲಿಯೇ ನಂಬರ್ ಒನ್ ಸ್ಥಾನಕ್ಕೆ ತರುವ ಗುರಿಯನ್ನು ಹೊಂದಿದ್ದಾರೆ. ಅವರು ಅಧಿಕಾರ ವಹಿಸಿಕೊಂಡ ಮೇಲೆ ಕಡಿಮೆ ಅವಧಿಯಲ್ಲಿ 780 ಕೊಟಿಗೂ ಅಧಿಕ ಠೇವಣಿ ಹೆಚ್ಚಾಗಿದೆ. ಜಿಲ್ಲೆಯ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಅವರ ಕುಟುಂಬದವರಿಗೆ 1 ಲಕ್ಷ ದವರಿಗೆ ಆರೋಗ್ಯ ವಿಮೆ, ಸಿಬ್ಬಂದಿಗಳಿಗೆ 5 ಲಕ್ಷದವರೆಗೆ ಜೀವ ವಿಮೆ ಮತ್ತು ಅಪಘಾತ ವಿಮೆ 10 ಲಕ್ಷ ರೂ ನೀಡುವ ಯೋಜನೆಯನ್ನು ಕೈಗೊಂಡಿದ್ದಾರೆ. ಕೃಷಿಯೇತರ ಸಾಲಗಳನ್ನು ಪಿಕೆಪಿಎಸ್‌ಗಳ ರಿಯಾಯತಿ ಬಡ್ಡಿ ದರದಲ್ಲಿ ವಿತರಣೆ, ಬ್ಯಾಂಕಿನ ವಿವಿಧ ಹೊಸ ಯೋಜನೆಗಳಿಗೆ ಶಾಸಕರಾದ ಶ್ರೀ ಬಾಲಚಂದ್ರ ಜಾರಕಿಹೊಳಿ, ದಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ನಿರ್ದೇಶಕರಾದ ಶ್ರೀ ಅರವಿಂದ ಪಾಟೀಲ, ಶ್ರೀ ಅಪ್ಪಾಸಾಹೇಬ ಕುಲಗೂಡೆ, ಶ್ರೀ ನೀಲಕಂಠ ಕಪ್ಪಲಗುದ್ದಿ, ಶ್ರೀ ಗಣೇಶ ಹುಕ್ಕೇರಿ, ಶ್ರೀ ಚನ್ನರಾಜ ಹಟ್ಟಿಹೊಳಿ, ಶ್ರೀ ವಿರುಪಾಕ್ಷಿ ಮಾಮನಿ, ಶ್ರೀ ಮಲ್ಲಪ್ಪ ಯಾದವಾಡ, ಶ್ರೀ ನಾನಾಸಾಹೇಬ ಪಾಟೀಲ, ಶ್ರೀ. ರಾಹುಲ ಜಾರಕಿಹೊಳಿ, ಪ್ರಧಾನ ವ್ಯವಸ್ಥಾಪಕ ಶ್ರೀ ಎನ್.ಜಿ. ಕಲಾವಂತ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿಗಳು ಉಪಸ್ಥಿತಿಯಲ್ಲಿ ಅಧಿಕೃತ ಚಾಲನೆ ನೀದರು, ರೈತರು, ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸಾಮಾನ್ಯ ಜನರಿಗೆ ಇನ್ನಷ್ಟು ಆರ್ಥಿಕ ಶಕ್ತಿಯನ್ನು ನೀಡುವ ಸದುದ್ದೇಶ ಹೊಂದಿದ್ದಾರೆ.

ದಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ ತಾಲೂಕಿನ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರ ಸೌಹಾರ್ದಯುತ ಸಭೆಗಳನ್ನು ನಡೆಸಿದ್ದಾರೆ. ಡಿ.ಸಿ.ಸಿ.ಬ್ಯಾಂಕ್ ಮತ್ತು ತಮ್ಮ ಸಹಕಾರಿ ಸಂಘಗಳ ನಡುವೆ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚಿಂತನೆಮಾಡಿದ್ದಾರೆ, ಸಹಕಾರ ಕ್ಷೇತ್ರದ ಬಲವರ್ಧನೆಗಾಗಿ ಸಂಘಗಳ ನಡುವಿನ ಪರಸ್ಪರ ಸಹಕಾರ, ಪಾರದರ್ಶಕತೆ, ಪರಿಣಾಮಕಾರಿ ಆಡಳಿತ, ಸದಸ್ಯರಿಗೆ ಮತ್ತು ರೈತರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುವುದು ಹಾಗೂ ಸಂಘದ ಆರ್ಥಿಕ ಸ್ಥಿರತೆಯನ್ನು ಬಲವರ್ಧನೆಗೊಳಿಸುವುದರ ಕಡೆಗೆ ಹೆಚ್ಚು ಗಮನ ಹರಿಸಿದ್ದಾರೆ.


ಸಮಾಜದ ರಚನೆಯಲ್ಲಿ ಶಿಕ್ಷಣದ ವ್ಯವಸ್ಥೆಯಲ್ಲಿ, ಗ್ರಾಮೀಣ ಭಾಗದ ಜನರ ಆಲೋಚನೆಗಳಲ್ಲಿ, ಸಂಸ್ಕೃತಿಯಲ್ಲಿ, ಮೌಲ್ಯಗಳಲ್ಲಿ, ಹವ್ಯಾಸಗಳಲ್ಲಿ ಹಾಗೂ ಜನರು ಜೀವಿಸುವ ರೀತಿಯಲ್ಲಿ ಹೊಸತನವನ್ನು ತುಂಬಲು ಸದಾ ಇವರು ಕ್ರಿಯಾಶೀಲರಾಗಿರುತ್ತಾರೆ. ಸರ್ವರಿಗೂ ಒಳಿತಾಗಲಿ ಎಂಬ ಮನೋಭಾವನೆ, ಸಮಾಜನಿಷ್ಠ ಪರಿಕಲ್ಪನೆ ಹಾಗೂ ಮಾನವೀಯ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಂತರ್ಗತ ಮಾಡಿಕೊಂಡು ಸದಾ ಮಾನವ ಸಂಬಂಧಗಳ ಪರಿವರ್ತನೆಗೆ ಕಂಕಣಬದ್ಧರಾಗಿರುವುದು ಅಭಿಮಾನದ ಸಂಗತಿಯಾಗಿದೆ. ಸಹಕಾರ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಔದ್ಯೋಗಿಕ, ರಾಜಕೀಯ ಕ್ಷೇತ್ರಗಳ ಶ್ರೇಯಸ್ಸಿಗಾಗಿ ನಿತ್ಯ ಚಿಂತನೆಗಳನ್ನು ಮಾಡಿ ಆಯಾ ಕ್ಷೇತ್ರಗಳಲ್ಲಿ ವಿಶಿಷ್ಠ ಛಾಪು ಮೂಡಿಸಿ ಪರಿವರ್ತನೆಯ ಹರಿಕಾರರಾಗಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನರ ಅಭಿರುಚಿಗಳಿಗೆ, ಅಗತ್ಯತೆಗಳಿಗೆ, ಮನೋಪ್ರವೃತ್ತಿಗಳಿಗೆ ಸದಾ ಸ್ಪಂದಿಸುತ್ತಿದ್ದಾರೆ.

ಯಾವುದೇ ತಾರತಮ್ಯವಿಲ್ಲದೇ ಬಡವರು, ಅಸಹಾಯಕರು, ದುರ್ಬಲರು, ನಿರ್ಗತಿಕರು ಹಾಗೂ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಮತ್ತು ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ತರುವಲ್ಲಿ ಅಣ್ಣಾಜೀಯವರ ಪಾತ್ರ ಹಿರಿದಾಗಿದೆ. 'ಸರ್ವರಿಗೂ ಸಮಬಾಳು' ಎಂಬ ತತ್ತ್ವದಡಿಯಲ್ಲಿ ತಾವು ಕಟ್ಟಿ ಬೆಳೆಸುತ್ತಿರುವ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಅವಕಾಶ ನೀಡಿ, ದುಡಿಯುವ ವರ್ಗದ ಮನದಾಳದಲ್ಲಿ ಅನ್ನದಾತಾರೆಂದೇ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಇವರನ್ನು ಭಾಗ್ಯದಾತಾ, ಅನ್ನದಾತಾ ಎಂದು ಜನರು ಗೌರವಿಸಿ ಇವರ ಉಪಕಾರ ಸ್ಮರಣೆ ಮಾಡುತ್ತಿರುವುದು ನಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ಜನರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಇವರ ಕಾರ್ಯ ವೈಖರಿ ಶ್ಲಾಘನೀಯವಾಗಿದೆ. ಕ್ರಿಯಾಶೀಲತೆ ಮತ್ತು ಹೋರಾಟದ ಮನೋಭಾವನೆ, ಗುರಿ ಮುಟ್ಟುವವರೆಗೆ ಛಲಬಿಡದೇ ಮುನ್ನುಗ್ಗುವ ಧೈರ್ಯ ಇವರಿಗೆ ಪ್ರತಿಕ್ಷಣವು ಗೆಲುವು ತಂದುಕೊಡುತ್ತಿದೆ ಎಂಬುವುದಕ್ಕೆ ಇವರು ನಡೆದು ಬಂದ ಬದುಕಿನ ದಾರಿ ಹಾಗೂ ಕ್ರಮಿಸಿದ ಪರಿಯಿಂದ ಅರಿಯಬಹುದು.

ಸತ್ಕರ್ಮ, ಸದ್ವಿಚಾರ, ಸದ್ವಿಕಾಸ ಶೀಲ ಚಿಂತನೆಗಳನ್ನು ಮೈಗೂ ಡಿಸಿಕೊಂಡು 'ಮಾತು ಕಡಿಮೆ ಕೆಲಸ ಹೆಚ್ಚು,' 'ಕಾಯಕವೇ ಕೈಲಾಸ,' 'ನುಡಿದಂತೆ ನಡೆ' ಎಂಬ ತತ್ತ್ವಗಳನ್ನು ಪರಿಪಾಲಿಸಿ ಸಮಾಜದ ಸುಖ ತನ್ನ ಸುಖವೆಂದು ಭಾವಿಸುವ ಇವರು ರಾಜಕಾರಣಿಗಳಲ್ಲಿಯೇ ಅಪರೂಪದ ರಾಜಕಾರಣಿ. ವಿವಿಧ ಕ್ಷೇತ್ರಗಳಿಗೆ ತನು ಮನ ಧನ ಸಮರ್ಪಣೆ ಮಾಡಿ ತಮ್ಮ ಹಿರಿಗುಣ ಮೆರೆದಿದ್ದಾರೆ. ಅಸಹಾಯಕರಿಗೆ ಧೈರ್ಯ, ಆತ್ಮಸ್ಥೈರ್ಯ ಹಾಗೂ ಪುನಃಚೇತನ ತುಂಬಿ ಅವರಲ್ಲಿ ಬದುಕುವ ಆಶಾಭಾವನೆಗಳನ್ನು ಮೂಡಿಸುತ್ತಿರುವ ಇವರಿಗೆ ನಮ್ಮ ಗೌರವ ಪೂರ್ವಕ ಸಲಾಂ...

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ



# ವಿಶ್ವ ಸ್ಕೌಟ್ ದಿನ 2026

ವಿಶ್ವ ಸ್ಕೌಟ್ ದಿನವನ್ನು ಪ್ರತಿ ವರ್ಷ ಫೆಬ್ರವರಿ 22 ರಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಫೆಬ್ರವರಿ 22 ರಂದು, ರಾಬರ್ಟ್ ಬಾಡೆನ್ ಜನಿಸಿದ ಪೊವೆಲ್ ಅವರ ವಾರ್ಷಿಕೋತ್ಸವವನ್ನು ವಿಶ್ವ ಸ್ಕೌಟ್ ದಿನವನ್ನು ಆಚರಿಸುವ ಮೂಲಕ ನಾವು ಗೌರವಿಸುತ್ತೇವೆ. 1857 ರಲ್ಲಿ ಜನಿಸಿದ ಬ್ಯಾರನ್ ಬಾಡೆನ್-ಪೊವೆಲ್ ಅವರನ್ನು ಸ್ಕೌಟಿಂಗ್‌ನ ಪ್ರವರ್ತಕ ಎಂದು ಪರಿಗಣಿಸಲಾಗುತ್ತದೆ. ಸ್ಕೌಟ್ಸ್ ಮತ್ತು ಗೈಡ್‌ಗಳ ಸೇವೆಯನ್ನು ಸ್ಮರಿಸಲು ವಿಶ್ವ ಸ್ಕೌಟ್ ದಿನವನ್ನು ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತದ ಸ್ಕೌಟ್‌ಗಳು ಈ ದಿನವನ್ನು ಹೆಚ್ಚುವರಿ ಉತ್ಸಾಹ ಮತ್ತು ಕಠಿಣತೆಯಿಂದ ಆಚರಿಸುತ್ತಾರೆ. ಪ್ರಪಂಚದಾದ್ಯಂತದ ಸ್ಕೌಟ್‌ಗಳ ಕೆಲಸಕ್ಕೆ ಗೌರವ ಸಲ್ಲಿಸಲು ವಿಶ್ವ ಸ್ಕೌಟ್ ದಿನವನ್ನು ಆಚರಿಸಲಾಗುತ್ತದೆ.

ನಮ್ಮ ಸುತ್ತಲಿನ ಅನೇಕ ಜನರ ಜೀವನದಲ್ಲಿ ಬದಲಾವಣೆಯನ್ನು ತರುವುದು ಅವರ ಗಮನಾರ್ಹ ಸೇವೆಯಾಗಿದೆ. ವಿಶ್ವ ಸ್ಕೌಟ್ ದಿನವನ್ನು ಜಗತ್ತಿಗೆ ಅವರ ನಿಸ್ವಾರ್ಥ ಸೇವೆಗಳಿಗಾಗಿ ಸ್ಕೌಟ್‌ಗಳು ಮತ್ತು ಗೈಡ್‌ಗಳಿಗೆ ಸಮರ್ಪಿಸಲಾಗಿದೆ. 1909 ರಲ್ಲಿ ಭಾರತದಲ್ಲಿ ಸ್ಕೌಟಿಂಗ್ ಪ್ರಾರಂಭವಾಯಿತು. ಪರಿಹಾರ ಭಾರತದಾದ್ಯಂತ ಸ್ಕೌಟ್ ಮತ್ತು ಗೈಡ್ ಸಂಘಗಳ ಸಂಖ್ಯೆ ನಾಯಿಕೊಡೆಗಳಂತೆ ಹೊರಹೊಮ್ಮುತ್ತಿದ್ದರಿಂದ ಭಾರತವು ಆರಂಭದಿಂದಲೂ ಬಹಳ ಪ್ರಸಿದ್ಧವಾಗಿತ್ತು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘವನ್ನು 1951 ರಲ್ಲಿ ರಚಿಸಲಾಯಿತು. ಸ್ಕೌಟ್‌ಗಳ ಸಭೆಯ ಮೂಲಕ ಸ್ಕೌಟ್ ದಿನವನ್ನು ಆಚರಿಸಲಾಗುತ್ತದೆ ಮತ್ತು ಮೆರವಣಿಗೆಗಳು ಮತ್ತು ಮಹಾನ್ ಮುಖ್ಯಸ್ಥರ ಜೀವನದ ಕುರಿತು ಚರ್ಚೆಯ ಮೂಲಕ ಗೌರವ ಸಲ್ಲಿಸಲಾಗುತ್ತದೆ. ಸಮಾಜವನ್ನು ಸುಧಾರಿಸುವಲ್ಲಿ ಸ್ಕೌಟ್‌ಗಳ ಮಹತ್ವದ ಬಗ್ಗೆ ಪೀಳಿಗೆಗೆ ಅರಿವು ಮೂಡಿಸುವ ಪ್ರಯತ್ನವೇ ಸ್ಕೌಟ್ ದಿನ.

**ವಿಶ್ವ ಸ್ಕೌಟ್ ದಿನದ ಇತಿಹಾಸ:**

1907 ರಲ್ಲಿ ಬಾಡೆನ್-ಪೊವೆಲ್ ಡಾರ್ಸೆಟ್‌ನ ಪೂಲ್‌ನಲ್ಲಿರುವ ಬ್ರೌನ್ಸಿಯಾ ದ್ವೀಪದಲ್ಲಿ ಪರೀಕ್ಷಾ ಕೇಂದ್ರವನ್ನು ನಿರ್ವಹಿಸಿದರು. ಅವರು ಏಕಕಾಲದಲ್ಲಿ 22 ಹುಡುಗರನ್ನು ಕರೆತಂದು ತಮ್ಮ ಮೇಲ್ವಿಚಾರಣೆಯಲ್ಲಿ ಬೇಸ್‌ನಲ್ಲಿ ಇರಿಸಿದರು. ಕೆಲವು ಹುಡುಗರು ಕಾರ್ಮಿಕ ವರ್ಗದ ಮನೆಗಳಿಂದ ಬಂದವರು ಮತ್ತು ಇನ್ನೂ ಕೆಲವರು ಸಾರ್ವಜನಿಕ ಶಾಲೆಗಳಿಂದ ಬಂದವರು. ಇಡೀ ಜಗತ್ತು ಬೇಸ್‌ನ ಫಲಿತಾಂಶಕ್ಕಾಗಿ ಕಾಯುತ್ತಿತ್ತು. 1908 ರಲ್ಲಿ, "ಸ್ಕೌಟಿಂಗ್ ಫಾರ್ ಬಾಯ್ಸ್" ಅನ್ನು ಬಾಡೆನ್ ಪೊವೆಲ್ ಮೊದಲ ಬಾರಿಗೆ ಪ್ರಕಟಿಸಿದರು. ಪುಸ್ತಕ ಒಪ್ಪಂದವು ಅತ್ಯುತ್ತಮವಾಗಿತ್ತು. ಹುಡುಗರು ಮೊದಲ ಬಾರಿಗೆ ಸ್ಕೌಟ್ ಪೆಟ್ರೋಲ್‌ಗಳನ್ನು ರಚಿಸಿದರು. ತರಬೇತಿ ಶಿಬಿರವು ಸಂಘಟನೆಯ ರಚನೆಗೆ ದಾರಿ ಮಾಡಿಕೊಟ್ಟಿತು. ದೇಶದ ಯುವಕರು ಈ ಕಾಯಿದೆಯಿಂದ ಹೆಚ್ಚು ಪ್ರಭಾವಿತರಾದರು ಮತ್ತು ಸಮಾಜಕ್ಕೆ ಸೇವೆ ಸಲ್ಲಿಸಲು ತಮ್ಮನ್ನು ತಾವು ತರಬೇತಿಗೊಳಿಸಲು ಪ್ರಾರಂಭಿಸಿದರು. ಅಂದಿನಿಂದ 'ಸ್ಕೌಟಿಂಗ್ ಫಾರ್ ಬಾಯ್ಸ್' ಅನ್ನು ಅನೇಕ ವಿಭಿನ್ನ ಶಬ್ದಕೋಶಗಳು ಮತ್ತು ಭಾಷಾವೈಶಿಷ್ಟ್ಯಗಳಾಗಿ ಅರ್ಥೈಸಲಾಗಿದೆ.

ಇದರ ನಂತರ, ಹುಡುಗರು ದೇಶಾದ್ಯಂತ ಸ್ಕೌಟ್ ಪಡೆಗಳನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದರು. 1908 ರಲ್ಲಿ, ಸ್ಕೌಟ್ ಚಳುವಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪೂರೈಸಲು ಏಕಕಾಲದಲ್ಲಿ ಒಂದು ಕಚೇರಿಯನ್ನು ಸ್ಥಾಪಿಸಲಾಯಿತು. ಸ್ಕೌಟಿಂಗ್ ಅನ್ನು ಬ್ರಿಟಿಷ್ ಕಾಮನ್‌ವೆಲ್ತ್‌ನಾದ್ಯಂತ ಮತ್ತು ವಿವಿಧ ದೇಶಗಳಿಗೆ ಕರೆದೊಯ್ಯಲಾಯಿತು ಮತ್ತು ಯುವ ತರಬೇತಿ ಅಂತಿಮವಾಗಿ ಪ್ರಸಿದ್ಧವಾಯಿತು. 1920 ರಲ್ಲಿ ಲಂಡನ್‌ನ ಒಲಿಂಪಿಯಾದಲ್ಲಿ ಪ್ರಮುಖ ಜಾಗತಿಕ ಸ್ಕೌಟ್ ಜಾಂಬೂರಿ ವಾಸಸ್ಥಾನವಾಗಿತ್ತು. ಪೊವೆಲ್ ಅವರನ್ನು ವಿಶ್ವದ ಮುಖ್ಯ ಸ್ಕೌಟ್ ಎಂದು ಸರ್ವಾನುಮತದಿಂದ ಶ್ಲಾಘಿಸಲಾಯಿತು. 1929 ರಲ್ಲಿ ಮೂರನೇ ವಿಶ್ವ ಸ್ಕೌಟ್ ಜಾಂಬೂರಿಯ ಸಮಯದಲ್ಲಿ, ಅವರು ಜಾಮ್-ರೋಲ್ ಎಂಬ ಅಡ್ಡಹೆಸರಿನ ಕಾರನ್ನು ಸ್ವಾಗತಿಸಿದರು. ಅವರು ಎಕ್ಲೆಸ್ ಕ್ಯಾರವಾನ್ ಅನ್ನು ಸಹ ಪಡೆದರು. ಅವರು ಯುವಕರ ಶಿಕ್ಷಣವನ್ನು ಸುಧಾರಿಸುವಲ್ಲಿ ಮತ್ತು ಮುಕ್ತ ಮನಸ್ಸು ಮತ್ತು ಮನಸ್ಥಿತಿಯನ್ನು ಸುಗಮಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸಿದರು. ಸ್ಕೌಟಿಂಗ್ ಚಳುವಳಿಗೆ ಸೂಚನೆ ನೀಡಿದವರು ಅವರೇ. ಅಂದಾಜಿನ ಪ್ರಕಾರ, 1939 ರ ಹೊತ್ತಿಗೆ ಜಗತ್ತಿನಲ್ಲಿ 3.3 ಮಿಲಿಯನ್ ಸ್ಕೌಟ್‌ಗಳು ಇದ್ದಾರೆ.

**ನಿಪ್ಪಾಣಿಯಲ್ಲಿ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ ಆಳ್ವಾಸ್ ನುಡಿಸಿರಿ ವಿರಾಸತ್ ಘಟಕದ ವತಿಯಿಂದ**

## ಆಳ್ವಾಸ್ ಸಾಂಸ್ಕೃತಿಕ ವೈಭವ ಕಾರ್ಯಕ್ರಮದ ವಿವಿಧ ದೃಶ್ಯಗಳು



# ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ.

## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ




ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ಅಂಗ ಸಂಸ್ಥೆಯಾದ ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ದಿನಾಂಕ 01-03-2026 ರಂದು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಜೊಲ್ಲೆ ಗ್ರೂಪ್‌ನ ಉಪಾಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿ ಸಂಸ್ಥೆ ಬೆಳೆದು ಬಂದ ದಾರಿಯನ್ನು ವಿವರಿಸಿದರು. ಉತ್ತಮ ಶಿಕ್ಷಣ ಪಡೆದು ದೇಶ ಸೇವೆ ಹಾಗೂ ಸಮಾಜ ಸೇವೆಯಲ್ಲಿ ತಮ್ಮನ್ನು ತಾವೂ ತೊಡಗಿಸಿಕೊಂಡು ಸರ್ವಾಂಗೀಣ ಬೆಳವಣಿಗೆಗೆ ಅಗತ್ಯವಾದ ಶಿಕ್ಷಣವನ್ನು ತಾವೂ ಪಡೆದು ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಹೊರಹೊಮ್ಮಿ ಎಂದು ಕರೆ ನೀಡಿದರು, ಮುಂಬರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗೆ ಶುಭಾಶಯವನ್ನು ಕೋರಿ ಫೋಟೋ ಕಾರ್ಯಕ್ರಮದಲ್ಲಿ ಭಾಗಿಯಾದರು.

ಈ ಸಂದರ್ಭದಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ಮಂಜುನಾಥ ಮಧುಕರ ಕುಂಬಾರ ಹಾಗೂ ಅನನ್ಯಾ ನರಸಪ್ಪಾ ಚೌಗಲೆ ಇವರಿಗೆ ಆದರ್ಶ ವಿದ್ಯಾರ್ಥಿ/ನಿ ಪ್ರಶಸ್ತಿ, ಪ್ರಾಥಮಿಕ ವಿಭಾಗದಲ್ಲಿ ಅನನ್ಯಾ ಮಾರುತಿ ಇಂಗಳೆ, ಪ್ರೌಢ ವಿಭಾಗದಲ್ಲಿ ಚೇತನ ಕೃಷ್ಣಪ್ಪಾ ಖೋತ ಇವರಿಗೆ ಜನರಲ್ ಚಾಂಪಿಯನ್ ಪ್ರಶಸ್ತಿ ನೀಡಲಾಯಿತು.

ಈ ಸಂದರ್ಭದಲ್ಲಿ 10ನೇ ವರ್ಗದ ಶಿಕ್ಷಕರಾದ ಎ.ಎ.ಖೋತ ಮಾತನಾಡಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆಗಾಗಿ ಕೈಗೊಂಡ ಯೋಜನೆಗಳು ಹಾಗೂ ಪರೀಕ್ಷೆ ತಯಾರಿಯ ಕುರಿತು ಮಕ್ಕಳಿಗೆ ಮಾರ್ಗದರ್ಶನ ಮಾಡಿದರು.

ಈ ಸಂದರ್ಭದಲ್ಲಿ ನಿರ್ದೇಶಕ ಮಂಡಳಿಯ ಸದಸ್ಯರಾದ ಸುಜಾತಾ ಕಬಾಡೆ, ಲತಾ ವಾಳಕೆ, ಎಲ್ಲ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ವ್ಹಿ.ಆರ್.ಭಿವಸೆ ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಶಾಲೆಯ ಸಹ ಶಿಕ್ಷಕರಾದ ಹೆಚ್ ಎಸ್ ಮಾಳಗೆ ನಿರೂಪಿಸಿ, ವಂದಿಸಿದರು.

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




ಶಾಖೆಗಳು 81

ಠೇವು 412+ ಕೋಟಿ

ಸಾಲ 202+ ಕೋಟಿ

ಸದಸ್ಯರು 51+ ಸಾವಿರ

ಗುಣಿತಾವಣಿಗಳು 157+ ಕೋಟಿ

ಲಾಭ 2024-25 01+ ಕೋಟಿ



ಶ್ರೀ ಮಹಾಲಕ್ಷ್ಮಿ ದೇವಿಯ ತ್ರೈವಾರ್ಷಿಕ ಯಾತ್ರೆ

ನಿಪ್ಪಾಣಿ ನಗರದ ನಗರವಾಸಿನಿ ಶ್ರೀ ಮಹಾಲಕ್ಷ್ಮಿ ದೇವಿಯ "ತ್ರೈವಾರ್ಷಿಕ ಯಾತ್ರೆ" ನಿಮಿತ್ಯ ಮೂರನೇ ದಿನದಂದು ತಾಯಂದಿರು ಬುತ್ತಿ ತಗೆದುಕೊಂಡು ಬಂದ ಸಂದರ್ಭದ ಅಮೃತ ಘಳಿಗೆ ಹಾಗೂ ವಾಸ್ತುಶಾಂತಿ, ಹೋಮ ಹವನ ಕಾರ್ಯಕ್ರಮದಲ್ಲಿ ಜೊಲ್ಲೆ ದಂಪತಿ ಭಾಗವಹಿಸಿದರು.



ಬೆಳದಿಂಗಳ ಊಟ

ಜೊಲ್ಲೆ ಗ್ರೂಪ್‌ನ ವಿವಿಧ ಅಂಗ ಸಂಸ್ಥೆಗಳ ವಸತಿ ಗೃಹದ ಸಿಬ್ಬಂದಿಗಳು ಆಯೋಜಿಸಿದ ಬೆಳದಿಂಗಳ ಊಟದ ನಿಮಿತ್ಯವಾಗಿ, ಜೊಲ್ಲೆ ದಂಪತಿ ತಮ್ಮ ಪರಿವಾರದೊಂದಿಗೆ ಆಗಮಿಸಿ ಸಮಾರಂಭದಲ್ಲಿ ಪಾಲ್ಗೊಂಡ ದೃಶ್ಯ.



ಉದ್ಘಾಟನೆ

ಭಿವಶಿ ಗ್ರಾಮದಲ್ಲಿ 15 ಲಕ್ಷ ರೂ. ಮೊತ್ತದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕೊಠಡಿಯನ್ನು ಸ್ಥಳೀಯ ಮುಖಂಡರು, ಊರಿನ ಹಿರಿಯರು, ಗಣ್ಯರು ಹಾಗೂ ಆಶಾಜ್ಯೋತಿ ವಿಶೇಷ ಚೇತನ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿ, ಸರಸ್ವತಿ ಮಾತೆಗೆ ಪೂಜೆ ಸಲ್ಲಿಸಿದರು.



**ಉದ್ಘಾಟನೆ**

ಬೆಳಗಾವಿ ನಗರದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಪಾಲಿಸಿ ಗ್ರೇಸ್ ಇನ್ಸೂರೆನ್ಸ್ ಬ್ರೋಕರ್ಸ್ ಪ್ರೈ.ಲಿ. ಮುಂಬಯಿ ಇವರ ಸಹಯೋಗದೊಂದಿಗೆ ಬೆಳಗಾವಿ, ಧಾರವಾಡ, ಹಾಗೂ ಗದಗ ವಿಭಾಗದ ವ್ಯಾಪ್ತಿಗೊಳಪಡುವ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರ ಸಭೆಯನ್ನು ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಉದ್ಘಾಟಿಸುತತಿರುವುದು.



**ಧನಾಧೇಶ ಪತ್ರ**

ಕುರ್ಲಿ ಗ್ರಾಮದ ಶ್ರೀ ಹಾಲಸಿದ್ಧನಾಥ ವಿವಿದೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ರೈತ ಸದಸ್ಯರಿಗೆ ಡಿ.ಸಿ.ಸಿ.ಬ್ಯಾಂಕ್ ವತಿಯಿಂದ 50 ಲಕ್ಷ ರೂ. ಕೃಷಿ ಪತ್ತಿನ ಸಾಲದ ಧನಾದೇಶ ಪತ್ರವನ್ನು ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ವಿತರಿಸುತ್ತಿರುವುದು.



**ಬಿ.ಎಲ್.ಎ.-2 ಕಾರ್ಯಗಾರ**

ನಿಪ್ಪಾಣಿ ಮತಕ್ಷೇತ್ರದ ಬಿ.ಎಲ್.ಎ.-2 ಕಾರ್ಯಗಾರ ಸಭೆ ಹಾಗೂ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಸಭೆಯನ್ನು ಉದ್ದೇಶಿಸಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಮಾತನಾಡುತ್ತಿರುವ ದೃಶ್ಯ.



**ಬಹುಮಾನ ವಿತರಣೆ**

ಮಹಾಶಿವರಾತ್ರಿ ಜಾತ್ರೆಯ ನಿಮಿತ್ಯ ನಿಪ್ಪಾಣಿ ನಗರದ ಮಹಾದೇವ ಉತ್ಸವ ಯಾತ್ರಾ ಕಮಿಟಿ ವತಿಯಿಂದ ಆಯೋಜಿಸಿದ ಭವ್ಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಟ್ರೊಫಿಗಳನ್ನು ಜೊಲ್ಲೆ ದಂಪತಿಗಳು ನೀಡಿದ ದೃಶ್ಯ.



**ಸತ್ಕಾರ**

ನಿಪ್ಪಾಣಿ ನಗರದಲ್ಲಿ ಶ್ರೀ ಸಂತ ಗಜಾನನ ಮಹಾರಾಜ ಮಂದಿರಕ್ಕೆ 148 ನೇ ಪ್ರಕಟ ದಿನದ ಉತ್ಸವದ ನಿಮಿತ್ಯ ಜೊಲ್ಲೆ ದಂಪತಿ ಮಂದಿರಕ್ಕೆ ಭೇಟಿ ನೀಡಿ ದೇವಸ್ಥಾನ ಕಮೀಟಿಯವರು ನೀಡಿದ ಸತ್ಕಾರ ಸ್ವೀಕರಿಸಿದ ದೃಶ್ಯ.



**ಚಾಲನೆ**

ಕಾರದಗಾ ಗ್ರಾಮದಲ್ಲಿ 1 ಕೋಟಿ 08 ಲಕ್ಷ ರೂ. ಮೊತ್ತದಲ್ಲಿ ವಿವಿಧ ಕಾಮಗಾರಿಗಳಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಚಾಲನೆ ನೀಡಿದ ದೃಶ್ಯ.



**ಸಿಬ್ಬಂದಿ ಪ್ರೋತ್ಸಾಹ ಕಾರ್ಯಕ್ರಮ**

ಬೆಳಗಾವಿ ಐ.ಟಿ.ಸಿ.ವೆಲ್ ಕವ್ ಹೋಟೆಲ್‌ನಲ್ಲಿ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸೈಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್)ಸಿಬ್ಬಂದಿಗಳು ಕಾರ್ಯಕ್ಷಮತೆಯಿಂದ ಅತ್ಯುತ್ತಮ ರೀತಿಯಲ್ಲಿ ಇನ್ಸುರನ್ಸ್ ವಿಭಾಗದಲಲ್ಲಿ ನಿಗದಿಪಡಿಸಿದ ಗುರಿ ತಲುಪಿದಕ್ಕೆ 1 ದಿನದ ಪ್ರೋತ್ಸಾಹ ಹಾಗೂ ಸ್ಫೂರ್ತಿ ಕಾರ್ಯಕ್ರಮಕ್ಕೆ ಜೊಲ್ಲೆ ಗ್ರೂಪ್ ಸಂಸ್ಥಾಪಕರಾದ, ಶ್ರೀ ಅಣ್ಣಾಸಾಹೇಬ ಜೊಲ್ಲೆ ಸಹ ಸಂಸ್ಥಾಪಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಶ್ರೀ ಜ್ಯೋತಿಪ್ರಸಾದ ಸೌ. ಪ್ರಿಯಾ ಜೊಲ್ಲೆ ಯವರು ಚಾಲನೆ ನೀಡಿದರು.




**ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮದಲ್ಲಿ**

ನ್ಯಾಷನಲ್ ಫೆಡರೇಶನ್ ಆಫ್ ಸೊಸಾಯಟಿಸ್ ಮತ್ತು ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ಸ್ (NAFSCUB) ವತಿಯಿಂದ ಡೆಹ್ರಾಡೂನ್‌ನ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ಆಯೋಜಿಸಲಾಗಿದ್ದ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)ನ ಹಿರಿಯ ನಿರ್ದೇಶಕರಾದ ಶ್ರೀ ಶ್ರೀಪಾದ್ ಆರ್. ನೇರ್ಲೇಕರ ಮತ್ತು ಶ್ರೀ ಕಾಶಿನಾಥ್ ಎಸ್. ಕಾಮತೆ ಅವರೊಂದಿಗೆ ಸಂಸ್ಥೆಯ ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಹದ್ದೂರ ಎ. ಗುರವ ಮತ್ತು ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಮೇಶ ಜಿ. ಕುಂಭಾರ ಅವರು ಭಾಗವಹಿಸಿದ್ದರು.